ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, the 2nd July 1981, Ashada 11 1903 S.E.

The House met in the Assembly Chamber, Vidhana Soudha, at one of the Clock.

MR. SPEAKER (SRI K. H. RANGANATH) in the Chair.

STATRED QUESTIONS

(To which oral answers were given.)

Failure of rains and scarcity of Drinking water in Kolar District

97 SRI C. M. ARMUGAM (KGF) J. M. REDDY (Mulbagal), and P. N. REDDY (Malur).—Will the Minister for Revenue be pleased to state.—

(a) whether it is a fact that the agriculturists of Kolar District are facing hardship due to failure of rains in the District ;

(b) whether it is a fact that even drinking water problem is also acute ;

(c) whether it is not a fact that the tank of the district have not been silted from a very long time and as a result the capacity of the tanks are very limited, which is not sufficient for even one crop ;

(d) whether the loans raised by these agriculturists from Societies etc., will be exempted from payment ;

(e) if not, the steps taken by Government in the matter ?

SRI MALLIKARJUNA M. KHARGE (Minister for Revenue).—

(a) Yes.

(b) There is scarcity of drinking water in some of the villages in the district.

(c) It is a fact that a good number of tanks have been silted up to some extent thereby decreasing the capacity of the tanks to certain extent. But it is not correct to say that the water stored in such tanks is not sufficient for one crop.

(d) The small and marginal farmers who do not own more than 5 acres of dry land are exempted from payment of Takavi Loans advanced by Revenue Department.

The State Government have formulated a scheme of waiver in October, 1980 according to which small and marginal farmers who have been affected by drought conditions and who are not willful defaulters will be given the benefit of waiver in respect of overdues as on 30-6-1980.

(e) Does not arise in view of replies to clause (d) above.

SRI C. M. ARUMUGHAM.—Sir, the Hon. Minister says that there is scarcity in certain villages in Kolar District. How many villages are not actually having water supply for drinking purpose ?

SRI MALLIKARJUN M. KHARGE.—Sir, in Kolar District out of the total number of villages of 2,888, nearly 2,773 villages in the district are affected by scarcity conditions. But the scarcity of drinking water is in 270 villages, where the drinking water is a very acute problem.

SR. C. M. ARUMUGHAM.—Most of the villages in Kolar District are without drinking water. But, taking 270 villages only what arrangements the Government have made to supply drinking water to these villages ?

SRI MALLIKARJUN M. KHARGE.—Sir, already we have identified 270 villages. Out of that we have already sunk bore-wells in 71 villages and we have yet to tackle 59 villages under "289 Relief works" and under regular budget we are spending money by digging bore-wells and also by transportation to provid drinking water.

SRI C. M. ARUMUGHAM.—Sir, transporting of water by bullock carts does not reach the villages and one bucket of water is not sufficient for one village. People are suffering with no food, no rain and no fodder for cattle. At least drinking water should be supplied to them even though you have to draw from far off places. You can make arrangements to supply water by wagons, lorries and trucks: Will the Government consider supplying water to these villages by lorries and wagons ?

SRI MALLIKARJUN M. KHARGE.—Wherever possible we will make that arrangement. We can supply by tankers and lorries. But it is not possible to supply by wagons.

SRI C. M. ARUMUGHAM.—You can bring water upto Malur by train - one wagon of water. That is possible.

SRI MALLIKARJUN M. KHARGE.—That is why I am telling by lorry we can provide water. But what you are telling is a new suggestion Definitely I will get it examined,

MR. SPEAKER.—Because there is broad-gauge upto Bangarpet, from Bangalore to Bangarpet it can be done.

SRI MALLIKARJUN M, KHARGE.—It is a good suggestion.

SRI C. M. ARUMUGHAM.—Sir, from Bangalore there is a narrow gauge line. From Bangalore to Doddaballapur, Chikkaballapur they can supply, At least if they have got interest they must do it. Otherwise how can people live ? Is it the decision of the Cabinet not to desilt the tanks ? In Kolar a number of tanks are silted. Of course. you are not in-charge of tanks. This pertains to Mr. Sadyojathappa who is in-charge. And our Finance Minister will never give one paise for de-silting of tanks. How many tanks are there and is there any proposal by the Government to de-silt there tanks ? If it is silted the water spreads in the catchment area and it also gets reduced. If it is reduced the storage of water is not enough for one crop. You kindly see whether any assessment was made. How many tanks in Kolar district have been de-silted: whether there is any programme before the Government to de-silt them apart from increasing the storage capacity of water which will be helpful to the villages ?

SRI MALLIKARJUN M. KHARGE.—This question pertains to scarcity Whatever help that is possible we have already extended. Regarding de-silting, even in scarcity areas we have taken up de-silting of tanks wherever it is economically feasible. For the rest of the things, PWD-Minor Irrigation department has to take action.

ಶ್ರೀ ಬಿ. ಎಸ್. ರೆಡ್ಡಿ.—ಪಾನ್ಯ ಮುಂಶ್ರಿಗಳು ಇವಾಗ ಬರಗಾಲ ಎಂದು ಹೇಳುತ್ತಾರೆ. ಅಲ್ಲದೇ ಈವಾಗ ಬರೇ ೨೫೦ ಹಳ್ಳಿಗಳಲ್ಲಿ ಮಾತ್ರ ನೀರು ಇಲ್ಲವೆಂದು ಹೇಳುತ್ತಾರೆ. ನಾನು ತಮಗೆ ಹೇಳಬೇಕಾದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಬಹುತೇ ಎಲ್ಲಾ ಹಳ್ಳಿಗಳಲ್ಲೂ ನೀರು ಇಲ್ಲ ಎಂದು ಹೇಳುತ್ತೇನೆ. ತಾವು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ ಯಾವ ಹಳ್ಳಿಗಳಲ್ಲಿ ನೀರು ಇಲ್ಲ, ಅಲ್ಲಿ ಬೋರ್‌ವೆಲ್ಸ್ ಹಾಕಿಸುತ್ತೇನೆಂದು ಹೇಳಿದಿರಿ. ಬೋರ್‌ವೆಲ್ ಹಾಕಿಸುತ್ತೀರೆ ಎಂದು ಅವರು ನಂಬಿ ಕೊಂಡಿದ್ದರು. ಆದರೆ ಅದಕ್ಕೆ ಬೇಕಾದಂಥ ರಿಗ್ಸ್ ಇಲ್ಲ ಎಂದು ಆ ಕೆಲಸವನ್ನು ನಿಲ್ಲಿಸಿಬಿಟ್ಟಿದ್ದಾರೆ ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಎರಡನೆಯದಾಗಿ, ಈ ಪ್ರಶ್ನೆಗೆ ಉತ್ತರವಾಗಿ ಐದು ಎಕರೆಗಳಿಗಿಂತ ಹೆಚ್ಚಿನ ಜಮೀನನ್ನು ಹೊಂದಿರದ ಸಣ್ಣ ಹಾಗೂ ಸಾಂದ್ರ ಬೇಸಾಯಗಾರರು ಕಂದಾಯ ಇಲಾಖೆಯಿಂದ ಪಡೆದ ತಕಾವಿ ಸಾಲ ಪಾವತಿ ಮಾಡುವುದನ್ನು ಮನ್ನಾ ಮಾಡಲಾಗಿದೆ ಎಂದು ಕೊಟ್ಟಿದ್ದೀರಿ ಆಲ್ಲದೆ ೧೯೮೦ನೇ ಅಕ್ಟೋಬರ್ ಮಾಹೆಯಲ್ಲಿ ರಾಜ್ಯ ಸರ್ಕಾರದವರು ಮನ್ನಾ ಮಾಡುವ ಯೋಜನೆಯೊಂದನ್ನು ರೂಪಿಸಿದ್ದು ಆಮೇರೆಗೆ ಬರಗಾಲ ಪರಿಸ್ಥಿತಿಗಳಿಂದ ತೊಂದರೆ ಪಟ್ಟ ಹಾಗೂ ಮನಃ ಪೂರ್ವಕವಾಗಿ ತಪ್ಪುತಸ್ಥರಲ್ಲದಂತ ಸಣ್ಣ ಹಾಗೂ ಸಾಂದ್ರ ಬೇಸಾಯಗಾರರಿಗೆ ೩೦-೬-೧೯೮೦ ರಂದು ಇದ್ದ ರೀತ್ಯಾ ಬಾಕಿ ಕೊಡಬೇಕಾದ ಮೊಬಲಗನ್ನು

ಮನ್ನಾ ಮಾಡುವ ಪ್ರಯೋಜನವನ್ನು ನೀಡಲಾಗುವುದು ಎಂದು ಹೇಳಿದ್ದೀರಿ. ಈ ಬಗ್ಗೆ ಒಂದು ಕಮಿಟಿಯನ್ನು ಕೂಡ ಮಾಡಿದ್ದೀರಿ, ಮನ್ನಾ ಮಾಡುತ್ತೇವೆ ಅಂತ ಹೋದ ಸಲ ಹೇಳಿದ್ದೀರಿ. ಇವತ್ತು ಏನಾಗಿದೆ ಎಂದರೆ ೧೯೮೦-೮೧ ರಲ್ಲಿ ನಮ್ಮ ಭಾಗದಲ್ಲಿರತಕ್ಕಂಥಾ ಸಣ್ಣ ರೈತರೇ ಆಗಲಿ ದೊಡ್ಡ ರೈತರೇ ಆಗಲಿ ಮಳೆ ಇಲ್ಲದೆ ತೊಂದರೆಗೊಳಗಾಗಿರುವ ಸಂದರ್ಭದಲ್ಲಿ ಸೊಸೈಟಿಯವರು ತಮ್ಮ ಸಾಲಕ್ಕಾಗಿ ಬಂದು ಅವರಿಂದ ಮಾಂಗಲ್ಯವನ್ನು ಕಿತ್ತುಕೊಂಡು ಹೋಗುತ್ತಿದ್ದಾರೆ. ತಮ್ಮ ಸಾಲವನ್ನು ಬಲವಂತವಾಗಿ ಈ ರೀತಿ ವಸೂಲಿ ಮಾಡುತ್ತಿದ್ದಾರೆ. ಆದುದರಿಂದ ನಾನು ಕೇಳುವುದೇನೆಂದರೆ ಈ ಪ್ರಶ್ನೆಗೆ ಉತ್ತರವಾಗಿ ಕಂದಾಯ ಇಲಾಖೆಯಿಂದ ಪಡೆದ ತಕಾವಿ ಸಾಲ ಪಾವತಿ ಮಾಡಲಾಗುವುದನ್ನು ಮನ್ನಾ ಮಾಡಲಾಗುವುದು ಎಂದು ಬರೆದಿದ್ದೀರೇ ವಿನಾ ಏನಾದರೂ ನಿಜವಾಗಿ ಅವರಿಗೆ ತಾವು ಮನ್ನಾ ಮಾಡಿದ್ದೀರಾ ಎಂದು ಕೇಳುತ್ತೇನೆ. ಅವರಿಗೆ ಈ ತಕಾವಿ ಸಾಲಗಳನ್ನು ಮನ್ನಾ ಮಾಡುತ್ತೇವೆ ಅಂತ ತಾವು ಹೇಳುತ್ತಾ ಇಲ್ಲ. ಈಗಲಾದರೂ ಕೂಡ ಈ ಬಗ್ಗೆ ಈ ರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಅಂತಲೂ ಹೇಳುತ್ತಾ ಇಲ್ಲ. ಈ ಬಗ್ಗೆ ಈವಾಗ ಏನು ಮಾಡುತ್ತೀರಿ ಅನ್ನುವುದನ್ನು ತಿಳಿಸುತ್ತೀರಾ ?

ಮೂರನೆಯದಾಗಿ ಡೀಸಿಲ್ಟಿಂಗ್ ವಿಚಾರ. ಈ ಪ್ರಶ್ನೆಯ (೩) ಗೆ ಉತ್ತರವಾಗಿ ಹೌದು ಬಹುತೇಕ ಕೆರೆಗಳಲ್ಲಿ ಕೆಲಮಟ್ಟಿಗೆ ಹೂಳು ಸೇರಿದ್ದರಿಂದ ಕೆರೆಗಳ ನೀರಿನ ಸಂಗ್ರಹಣ ಸಾಮರ್ಥ್ಯವು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಆದರೆ ಸದರಿ ಕೆರೆಗಳಲ್ಲಿ ಸಂಗ್ರಹಿಸಿದ ನೀರು ಒಂದು ಬೆಳೆಗೂ ಸಾಕಷ್ಟಿಲ್ಲ ವೆಂದು ಹೇಳುವುದು ಸರಿಯಲ್ಲ ಅಂತ ಹೇಳಿದ್ದೀರಿ. ಬೇಕಾದರೆ ತಾವು ಬಂದು ಪರೀಕ್ಷೆ ಮಾಡಿ. ಏನಾದರೂ ಸಾಕಷ್ಟು ಮಳೆ ಆದರೆ ಆದರಲ್ಲಿ ಒಂದು ಬೆಳೆಗೆ ಆಗುವಷ್ಟು ನೀರು ಬರುತ್ತದೆ. ಜಾಸ್ತಿ ನೀರು ಬರುವುದಿಲ್ಲ. ಒಂದು ಬೆಳೆ ಆಗಬೇಕಾದರೂ ಆ ಕೆರೆಯಲ್ಲಿ ೪ ತಿಂಗಳ ಕಾಲ ನೀರು ಇರಬೇಕು. ಆ ಕೆರೆಗಳಲ್ಲಿ ಹೂಳನ್ನೆತ್ತದೇ ಇರುವುದರಿಂದ ಸಾಕಷ್ಟು ನೀರು ಇರುವುದಿಲ್ಲ. ಆದುದರಿಂದ ಈ ಕೆರೆಗಳಲ್ಲಿ ಡೀಸಿಲ್ಟಿಂಗ್ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಅನ್ನುವುದನ್ನು ಹೇಳುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಅಧ್ಯಕ್ಷರೇ. ಈ ಕೋಲಾರ ಇಲ್ಲಿಗೆ ನಾನು ಮೂರು ಸಾರಿ ಭೇಟಿ ಕೊಟ್ಟಿದ್ದೇನೆ. ಆವಾಗ ಮಾನ್ಯ ಪಿ. ಎನ್. ರೆಡ್ಡಿಯವರು ನನ್ನನ್ನು ಭೇಟಿಯಾಗಲಿಲ್ಲಾ. ಅವರು ಆ ಸಂದರ್ಭದಲ್ಲಿ ನನ್ನನ್ನು ಭೇಟಿ ಮಾಡಿದ್ದರೆ ಆ ಸ್ಥಳದಲ್ಲೇ ಅವರು ಹೇಳಿದುದನ್ನು ಪರಿಶೀಲಿಸಿ ಆ ಬಗ್ಗೆ ಏನು ಸಾಧ್ಯ ಇತ್ತು ಅದನ್ನು ಮಾಡಬಹುದಾಗಿತ್ತು. ಬಹುಶಃ ತಮ್ಮ ತಾಲ್ಲೂಕಿನಲ್ಲಿ ೩೦ ಹಳ್ಳಿಗಳಲ್ಲಿ ಮಾತ್ರ ಡ್ರಿಂಕಿಂಗ್ ವಾಟರ್ ಪ್ರಾಬ್ಲಮ್ ಇದೆ. ಆ ಬಗ್ಗೆ ಈಗಾಗಲೇ ಅಲ್ಲಿಯ ಡೆಪ್ಯೂಟಿ ಕಮೀಷನರಿಗೆ ಬರೆದಿದ್ದೇವೆ. ಎಷ್ಟು ಹಳ್ಳಿಗಳಲ್ಲಿ ಡ್ರಿಂಕಿಂಗ್ ವಾಟರ್ ಇಲ್ಲ ಎನ್ನುವುದರ ಬಗ್ಗೆ ಅವರು ರಿಪೋರ್ಟ್ ಬರೆದಿದ್ದಾರೆ. ನನಗೆ ಬಂದಿರತಕ್ಕಂಥಾ ಅಂಕಿ ಅಂಶದ ಪ್ರಕಾರ ಹೇಳುತ್ತಿದ್ದೇನೆ.

ಶ್ರೀ ಪಿ. ಎನ್. ರೆಡ್ಡಿ.—ನಿಮಗೆ ಯಾವಾಗ ಈ ಅಂಕಿ ಅಂಶ ಬಂತು ಸ್ವಾಮಿ, ಇನ್ನೂ ಜಾಸ್ತಿ ಹಳ್ಳಿಗಳಲ್ಲಿ ಡ್ರಿಂಕಿಂಗ್ ವಾಟರ್ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಈ ಅಂಕಿಅಂಶ ಯಾವಾಗ ಬಂದು ಎಂದರೆ ಮಾನ್ಯ ಸದಸ್ಯರು ಯಾವಾಗ ಈ ಬಗ್ಗೆ ಪ್ರಶ್ನೆಯನ್ನು ಕಳುಹಿಸುತ್ತಾರೋ ಅಂದಿನವರೆಗೆ ಏನು ಪರಿಸ್ಥಿತಿ ಇದೆ ಎನ್ನುವುದನ್ನು ವಿವರಗಳನ್ನು ಸಂಗ್ರಹಿಸಿ ಅದಕ್ಕೆ ಉತ್ತರ ಕಳುಹಿಸುತ್ತಾರೆ.

ಇನ್ನು ಮಾನ್ಯ ಸದಸ್ಯರು ಡೀಸಿಲ್ಟಿಂಗ್ ವಿಚಾರ ಪ್ರಸಾಪ ಮಾಡಿದ್ದಾರೆ. ಇದು ಪಾಲಿಸಿ ವಿಚಾರ ಇದು ನನ್ನ ಖಾತೆಗೆ ಸಂಬಂಧವಿಲ್ಲದಿದ್ದರೂ ಕೂಡ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೊಂದಿಗೆ ಚರ್ಚೆ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ, ಸಧ್ಯಕ್ಕೆ ಈ ಪ್ರಶ್ನೆಗೆ ಅವರು ಕೇಳಿದುದು ಉದ್ಭವಿಸುವುದಿಲ್ಲ.

ಇನ್ನು ಸ್ಮಾಲ್ ಫಾರ್ಮರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಬಗ್ಗೆ ತಕಾವಿ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಈ ಪ್ರಶ್ನೆಯಲ್ಲಿ ಈಗಾಗಲೇ ಕೊಡಲಾಗಿದೆ. ಇದರಲ್ಲಿ ಇನ್ನೊಂದು ವಿಚಾರ ಏನೆಂದರೆ ಸೊಸೈಟಿಗಳ ಸಾಲದ ಬಗ್ಗೆ ಮನ್ನಾ ಮಾಡಬೇಕೆನ್ನುವುದಾದರೆ ಅದು ಪ್ರತ್ಯೇಕವಾದ ಪ್ರಶ್ನೆಯಾಯಿತು. ಅದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

SRI C.M. ARUMUGHAM.—Because it pertains to scarcity. will the Government be pleased to state whether how many works have been taken up by various departments like PWD, Agriculture Department, Horticulture Department, Sericulture Department, Revenue Department and Forest Department ? The number of works that have been taken up and the amount spent by each department so far, may be furnished.

SRI MALLIKARJUN M. KHARGE.—The number of works taken up under 289 Relief, under new plan heads is 462. The number of labourers employed is 16, 730. Budget works is 240. Total works taken up are 702 and the number of labourers employed is 22,326. Upto January 81 a total sum of Rs. 9,41,500 has been allotted. The total amount allotted to Kolar district before March 1981 was Rs. 69,31,000 and from March to 15th June it is Rs. 65,30,000. So, more than Rs. 1½ crores we have spent so far.

ಶ್ರೀ ಕೆ ಎಚ್. ಹನುಮೇಗೌಡ.—ಸ್ವಾಮಿ, ಕೋಲಾರ ಜಿಲ್ಲೆಯಲ್ಲಿ ಭೀಕರವಾದ ಕ್ಷಾಮ ತಾಂಡವ ವಾಡುತ್ತಾ ಇದೆ. ಕಳೆದವರ್ಷ ಮಳೆಯೂ ಆಗಿಲ್ಲ, ಇದರಿಂದ ಪೂರ್ಣವಾಗಿ ಬೆಳೆಯೂ ಕೂಡ ಹಾಳಾಗಿದೆ. ಲಕ್ಷಾಂತರ ದನಕರುಗಳಿಗೆ ಮೇವು ಇಲ್ಲ. ಅವುಗಳು ಇದ್ದಾವೋ ಇಲ್ಲವೋ ಏನೂ ಗೊತ್ತಾಗಲಿಲ್ಲ. ಈ ವರ್ಷ ಕೂಡ ಬಿತ್ತನೆಯನ್ನು ಮಾಡಿಲ್ಲ. ಈ ಪಶು ಸಂಪತ್ತನ್ನು ಉಳಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ? ಅವಕ್ಕೆ ಹುಲ್ಲು ಮತ್ತು ನೀರನ್ನು ಒದಗಿಸುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಿದ್ದೀರಾ ? ಅದಕ್ಕೆಲ್ಲಾ ನೀರನ್ನು, ಮೇವನ್ನು ಒದಗಿಸಲು ಏನಾದರೂ ವ್ಯವಸ್ಥೆಯನ್ನು ಮಾಡಬೇಕು. ಮಾನ್ಯ ಸಚಿವರು ಈ ಬಗ್ಗೆ ಬಹಳ ಲಘುವಾಗಿ ಇಲ್ಲಿ ಮಾತನಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಾನು ಇನ್ನೂ ಏನೂ ಮಾತನಾಡಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಅಲ್ಲಿ ಅವಕ್ಕೆ ಏನಾದರೂ ವ್ಯವಸ್ಥೆಯನ್ನು ಮಾನ್ಯ ಮಂತ್ರಿಯವರು ಕೂಡಲೇ ಮಾಡಬೇಕು. ಏಕೆಂದರೆ ಅಲ್ಲಿ ಪಶುಗಳನ್ನೇ ಅವಲಂಬಿಸಿ ಜೀವನ ಮಾಡತಕ್ಕಂಥ ಜನರು ಇದ್ದಾರೆ. ನೀವು ಏನೂ ವ್ಯವಸ್ಥೆ ಮಾಡಲಿಲ್ಲ ಎಂದರೆ ಅವರು ಏನು ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಸ್ವಾಮಿ, ನಾನು ಈಗಾಗಲೇ ಹೇಳಿದೆ, ಅಲ್ಲಿ ವಾಟರ್ ಸ್ಕೇರ್ಸಿಟಿ ಇದ್ದರೂ ಅಲ್ಲಿ ಟ್ರಾನ್ಸ್‌ಪೋರ್ಟ್ ವ್ಯವಸ್ಥೆಯನ್ನು ಮಾಡಿ ಅನೇಕ ಹಳ್ಳಿಗಳಿಗೆ ನೀರನ್ನು ಸಪ್ಲೈ ಮಾಡುತ್ತಿದ್ದೇವೆ. ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಪ್ರೋಗ್ರಾಂಗಳನ್ನೂ ಸಹ ತೆಗೆದುಕೊಂಡಿದ್ದೇವೆ. ಇದಕ್ಕೆಲ್ಲಾ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದೇವೆ. ಪಿ. ಎಚ್. ಇ. ಡಿಪಾರ್ಟ್‌ಮೆಂಟ್‌ನವರು ಮತ್ತು ರೂರಲ್ ಡೆವೆಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನವರೂ ಕೂಡ ಸಂಬಂಧಪಟ್ಟ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಕೋಲಾರ ಜಿಲ್ಲೆಯಲ್ಲಿ ಸಮಾರು ೧೦ ರಿಗ್‌ಗಳು ಕೆಲಸ ಮಾಡುತ್ತಿವೆ. ಅದರಲ್ಲಿ ಕೆಲವು ಕೆಟ್ಟುಹೋಗಿವೆ ಎಂದು ಹೇಳತಕ್ಕಂಥಾದ್ದೂ ಕೂಡ ನಿಜ, ಅವುಗಳಲ್ಲಿ ಒಂದೆರಡು ರಿಗ್‌ಗಳು ಕೆಟ್ಟುಹೋಗಿರಬಹುದು. ಮ್ಯಾಗ್ನಿಪಂ ನಂಬರ್ ಆಫ್ ರಿಗ್ಸ್ ಚೆನ್ನಾಗಿ ಕೆಲಸಮಾಡುತ್ತಿವೆ. ಸಾಕಷ್ಟು ನೀರನ್ನು ನಾವು ಸಪ್ಲೈ ಮಾಡುತ್ತಿದ್ದೇವೆ. ಪಶು ಸಂಪತ್ತನ್ನು ಉಳಿಸಬೇಕೆಂದು ಹೇಳಿ ನಾವು ಸಾಧ್ಯವಾದ ಮಟ್ಟಿಗೂ ಎಲ್ಲಾ ಪ್ರಯತ್ನ ಮಾಡಿದ್ದೇವೆ. ಅದಕ್ಕಾಗಿ ಕೋಟಿಗಟ್ಟಲೆ ಹಣವನ್ನು ನಾವು ಕೊಟ್ಟಿದ್ದೇವೆ. ಫಾಡರ್ ಬಗ್ಗೆ ಕೂಡ ತಾವು ಕೇಳಿದ್ದೀರಿ, ಅಕ್ಕಪಕ್ಕದ ಜಿಲ್ಲೆಗಳಿಂದ ಕೂಡ ಫಾಡರನ್ನು ಒದಗಿಸುವುದಕ್ಕೆ ಟ್ರಾನ್ಸ್‌ಪೋರ್ಟ್ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ. ಟಿ. ಎ. ಪಿ. ಸಿ. ಎಂ. ಮತ್ತು ಇತರ ವಾಲಂಟರಿ ಏಜೆನ್ಸಿ ಮುಖಾಂತರ ಡೊನೇಷನ್ ತೆಗೆದುಕೊಂಡು ಅದನ್ನೂ ಕೂಡ ಆ ಕೋಲಾರ ಜಿಲ್ಲೆಯಲ್ಲಿ ಹಂಚತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತಿದೆ.

ಶ್ರೀ ಪಿ. ಎನ್ ರೆಡ್ಡಿ.—ಸ್ವಾಮಿ, ಮಾನ್ಯ ರೆವಿನ್ಯೂ ಮಂತ್ರಿಯವರ ಗಮನಕ್ಕೆ ನಾನು ಒಂದು ವಿಚಾರವನ್ನು ತರುವುದಕ್ಕೆ ಬಯಸುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ ಮತ್ತು ಒಂದೆರಡು ರಿಗ್‌ಗಳು ಕೆಟ್ಟುಹೋಗಿದೆ ಎಂದು ಅವರೂ ಕೂಡ ಹೇಳುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಅನೇಕ ದೊಡ್ಡ ದೊಡ್ಡ ತಾಲ್ಲೂಕುಗಳು ಇವೆ. ಅಲ್ಲೆಲ್ಲಾ ಕುಡಿಯುವುದಕ್ಕೆ ನೀರೇ ಇಲ್ಲ. ರಿಗ್‌ಗಳು ಕೆಟ್ಟುಹೋಗಿದ್ದರೆ ಅದನ್ನು ರೀಪ್ಲೇಸ್ ಮಾಡುತ್ತಾರೆಯೇ ಹೇಗೆ ? ಅಲ್ಲಿ ಸರ್ಕಾರದವರು ಏನು ಮಾಡಿದ್ದಾರೆ ಎಂದರೆ ಬರಗಾಲಕ್ಕೆ ಶುತ್ತಾಗಿರತಕ್ಕಂಥ ತಾಲ್ಲೂಕುಗಳಿಗೆ ಕೊಟ್ಟಿರ ತಕ್ಕಂಥ ರಿಗ್ಸ್‌ಗಳನ್ನು ತೆಗೆದುಕೊಂಡು ಹೋಗಿ ಅರ್ಬನ್ ವಾಟರ್ ಸಪ್ಲೈ ಸ್ಕೀಂನಲ್ಲಿ ಹಾಕಿದ್ದಾರೆ. ಆದ್ದರಿಂದ ನಮ್ಮ ತಾಲ್ಲೂಕಿಗೆ ಹೆಚ್ಚಿನ ರೀತಿಯಲ್ಲಿ ರಿಗ್ಸ್‌ಗಳನ್ನು ಕೊಡುವುದಕ್ಕೆ ಇನ್ನು ೧೦ ದಿವಸದಲ್ಲಿ ಅದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆಯೇ ? ಇದನ್ನಾದರೂ ಹೇಳಿ. ಇದಕ್ಕೆ ನೀವು ೧೦ ದಿವಸ ತೆಗೆದುಕೊಳ್ಳಿ.

ಅಧ್ಯಕ್ಷರು.—ನೀವು ಈ ಬಗ್ಗೆ ಹೈಪೋತೆಟಿಕಲ್ ಆಗಿ ಹೇಳಿದರೆ ಏನು ಪ್ರಯೋಜನ? ಇಂತಿಂತಹ ತಾಲ್ಲೂಕುಗಳಲ್ಲಿ ಹೀಗೀಗೆ ಆಗಿದೆ ಎಂದು ಹೇಳಿದರೆ ಅದಕ್ಕೆ ಸ್ಪೆಸಿಫಿಕ್ ಆದ ಉತ್ತರ ಬರುತ್ತದೆ. ಅದನ್ನು ಬಿಟ್ಟು, ಇಷ್ಟು ಕಳಿಸಿದರು, ಅದು ಹೀಗಾಯಿತು ಎಂದರೆ ಅವರು ಉತ್ತರ ಹೇಳುವುದಾದರೂ ಹೇಗೆ ?

ಶ್ರೀ ಪಿ.ಎನ್. ರೆಡ್ಡಿ.—ಸ್ವಾಮಿ, ನಮ್ಮ ಮಾಲೂರು ತಾಲ್ಲೂಕಿನಲ್ಲಿ ೧೪ ವರ್ಷದಿಂದ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಕೊಟ್ಟಿರತಕ್ಕಂಥ ರಿಗ್‌ಗಳನ್ನು ಅರ್ಬನ್ ವಾಟರ್ ಸ್ಕೀಂಗ್ ತೆಗೆದುಕೊಂಡು ಹೋಗಿ ಹಾಕಿಸಿಬಿಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರು ಇಲ್ಲದೇ ತುಂಬಾ ತಾಪತ್ರಯವಾಗಿರುವಾಗ ಆ ಜನರಿಗೆ ನಾವು ಹೇಗೆ ಮುಖ ತೋರಿಸಬೇಕು ? ಈ ಬಗ್ಗೆ ಸರ್ಕಾರದವರು ಈ ಕೊಡಲೇ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.— ಸ್ವಾಮಿ, ಮಾನ್ಯ ಸದಸ್ಯರು ಮಾಲೂರು ತಾಲ್ಲೂಕಿನಲ್ಲಿ ರಿಗ್ಸ್ ಹಾಕಿಲ್ಲ ಎಂದು ಹೇಳಿದ್ದಾರೆ, ನನಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ಡಿಪಾರ್ಟ್‌ಮೆಂಟ್ ರಿಗ್ಸ್ ೩, ಪ್ರೈವೇಟ್ ರಿಗ್ಸ್ ೫ ಮತ್ತು ಸ್ಟೋ ರಿಗ್ಸ್ ೨ ಹೀಗೆ ೧೦ ರಿಗ್‌ಗಳು ಅಲ್ಲಿದೆ. ಮಾಲೂರು ತಾಲ್ಲೂಕಿನಲ್ಲಿ ಈಗ ರಿಗ್ಸ್‌ಗಳೇ ಇಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅಲ್ಲಿ ಇಲ್ಲದೆ ಹೋದರೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅದನ್ನು ಕಳಿಸತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಈಗಾಗಲೇ ಹೇಳಿದ್ದೇನೆ, ಸುಮಾರು ೨೭೨ ಹಳ್ಳಿಗಳಲ್ಲಿ ಈ ಕುಡಿಯುವ ನೀರು ಇಲ್ಲ ಎಂದು. ಈಗಾಗಲೇ ಕೆಲವಾರು ಹಳ್ಳಿಗಳಲ್ಲಿ ಈ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅವನ್ನು ಬಿಟ್ಟು ಉಳಿದಂಥ ಊರುಗಳಲ್ಲಿ ಅಂದರೆ ಈ ಡ್ರಿಂಕಿಂಗ್ ವಾಟರ್ ಸ್ಕೇರ್ಸಿಟಿ ಎಲ್ಲಿದೆ ಅಂತಹ ಕಡೆ ಈ ಯೋಜನೆಯನ್ನು ಮುಂದುವರಿಸುತ್ತೇವೆ ಎನ್ನು ತಕ್ಕಂಥ ಮಾತನ್ನು ಹೇಳಿದ್ದೇನೆ. ಈ ಬಗ್ಗೆ ನಾವು ಆದೇಶ ಕೊಡುತ್ತೇವೆ. ಇದು ಡ್ರಿಂಕಿಂಗ್ ವಾಟರ್ ವ್ಯವಸ್ಥೆ ಮಾತ್ರ ಸೀಮಿತವಾಗಿಲ್ಲ. ಕಾಮಗಾರಿ ಕೆಲಸ ಮಾಡಿಸುವುದಕ್ಕೂ ಆಜ್ಞೆ ಕೊಡುತ್ತೇವೆ ಎಂದು ಹೇಳಿದ್ದೇನೆ. ಅಮೇಲೆ ಶ್ರೀ ಆರ್ಯಗಂರವರು ಇಲ್ಲಿಯವರಿಗೆ ಈ ವಿಚಾರದಲ್ಲಿ ಎಷ್ಟು ದುಡ್ಡು ಖರ್ಚಾಯಿತು ಎಂದು ಕೇಳುತ್ತಿದ್ದರು. The amount released during 1980-81 was Rs. 69,31,000 and during 1981-82 it is 65,30,000

Construction of Tanks in Hukkeri Taluk

132 SRI MALLARA GOWDA S. PATIL (Sankeshwar).—Will the Minister for Transport and Minor Irrigation be pleassd to state.—

(a) the total number of tanks constructed for the last five years in Hukkeri Taluk and the number of tanks with their names where Survey work has been done now for Construction of tanks ;